ಜತನವಾಗಿಟ್ಟುಕೊಂಡು ಮನೆಕಡೆ ಹೊರಟ. ಎರಡೂ ತೋಳುಗಳು ಸರತಿಯಲ್ಲಿ ಅವನ ಸೋರುವ ಮೂಗು, ಬೆವರು, ದೂಳನ್ನು ಒರೆಸುವ ಕಾಯಕದಲ್ಲಿ ನಿರತವಾದವು.

ಮನೆಗೆ ಬಂದವನೇ ಎಂದೋ ಕಳೆದು ಹೋದ ಅದೃಷ್ಟವನ್ನು ಹುಡುಕುವವನಂತೆ ಬ್ಲೇಡು ಹುಡುಕ ತೊಡಗಿದ. ಅರ್ಧಂಬರ್ಧ ಬಣ್ಣ ಉಳಿಸಿಕೊಂಡು, ಪೂರ್ಣ ಪ್ರಮಾಣದ ತುಕ್ಕನ್ನೆ ಬಳಿದುಕೊಂಡ ಒಂದು



ತುಣುಕು ಸಿಕ್ಕಿತು. ಇಷ್ಟು ದಿನ ಅವನಿಗೆ ಸಂಬಂಧವೇ ಇಲ್ಲದ ವಸ್ತುವೊಂದು ಇಂದು ಆಪ್ತವಾದಂತಾಗಿ ಪುಳುಕವೆನಿಸಿತು; ನಡುರಸ್ತೆಯಲ್ಲಿ ಬೈಕಿನ ಪೆಟ್ರೋಲು ಖಾಲಿಯಾದಾಗ ಪೆಟ್ರೋಲ್ ತುಂಬಿಸಿಕೊಂಡು ಬರಲು ಎಲ್ಲೊ ಬದಿಯಲ್ಲಿ ಬಿದ್ದಿರುವ ಹಳೆಯ ಪ್ಲಾಸ್ಟಿಕ್ ಬಾಟಲಿಯೊಂದು ಬಂಧುವಾದಂತೆ ಆ ಕ್ಷಣಕ್ಕೆ ಆ ಮುರುಕು ಬ್ಲೇಡು ಅಭಯವನ್ನಿತ್ತಿತ್ತು. ಗಬಕ್ಕನೆ ಎತ್ತಿಕೊಂಡು ಹಿತ್ತಿಲಿನ ಮೂಲೆಯೊಂದರ ಕಲ್ಲಿನ ಮೇಲೆ ಕೂತು ಮಾಸ್ತರ್ ಕೆತ್ತುವಂತೆಯೆ ಹಿಡಿದು ಸೀಸದ ಕಡ್ಡಿಯನ್ನು ಚೂಪು ಮಾಡಲು ಮುಂದಾದ. ಎಂದೋ ಜೀವ ಕಳೆದುಕೊಂಡು ಬರೀ ಶರೀರವನ್ನು ಮಾತ್ರ ಉಳಿಸಿಕೊಂಡಿದ್ದ ತುಂಡು ಬ್ಲೇಡು ಅದರ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಕೊನೆಗೆ ಅವನ ಕೈಯನ್ನಾದರೂ ಒಂಚೂರು ಗಾಯ ಮಾಡಿ ರಕ್ತ ಒಸರುವಂತಾದರೂ ಮಾಡಬೇಕಿದ್ದ ಅದು ನನ್ನಿಂದ ಏನೂ ಸಾಧ್ಯವಿಲ್ಲ ಎಂದು ಘೋಷಿಸಿದಂತಿತ್ತು!

ಅವನ ಕೈಯಲ್ಲಿಂದ ತುಂಡು ಬ್ಲೇಡು ಅವರ ಮನೆಯ ಬದುಕಿನಂತೆಯೆ ಸವೆದು ಹೋಗಿತ್ತು. 'ತನ್ನ ಅಪ್ಪ ಅದರಿಂದ ಹೇಗೆ ತಾನೆ ತನ್ನ ಗಡ್ಡವನ್ನು ತೆಗೆಯುತ್ತಾನೊ?' ಎಂದುಕೊಂಡ. ಅಪ್ಪ ಈಗ ಅವನಿಗೆ ತುಂಬಾ ವಿಶೇಷವೆನಿಸಿದ. ಈಗ ಮಾಡುವುದೇನು ಎಂದು ಯೋಚಿಸಿದ. ಅವನು ಸುಮ್ಮನಿದ್ದರೂ, ತೂತು ಬಿದ್ದ ಅವನ ಬ್ಯಾಗಿನ ಮೂಲೆಯಲ್ಲಿ ಅವಿತಿದ್ದ ಸೀಸದ ಕಡ್ಡಿ ಸುಮ್ಮನಿರಲು ಬಿಡುವಂತಿರಲಿಲ್ಲ. 'ಅಪ್ಪನ ಬಳಿ ಕೊಟ್ಟು ಕೆತ್ತಿಸಿಕೊಂಡರೆ?' ಎಂಬ ಯೋಚನೆಯೂ ಬಂದಿತು. ಬಂದ ಯೋಚನೆಯಿಂದ ಮತ್ತೆ ಅವನು ಮುಂದೆ ಸರಿಯಲಿಲ್ಲ. 'ಇದೆಲ್ಲ ನಿಂಗ್ಯಾಕೆ? ದೊಡ್ಡವನಾದ ಮೇಲೆ ಬರೆಯುವಂತೆ ಕೊಡು' ಅಂತಂದು ಅಪ್ಪ ಎತ್ತಿಟ್ಟುಬಿಟ್ಟರೆ ಅನ್ನುವ ಯೋಚನೆ ಬಂದು ಸುಮ್ಮನಾಗಿಬಿಟ್ಟ. ಅಷ್ಟಕ್ಕೂ ಓದಲು ಬರೆಯಲು ಬರದ ಅಪ್ಪನಿಗೆ ಸೀಸದ ಕಡ್ಡಿಯನ್ನು ಕೆತ್ತಲು ತಾನೆ ಎಲ್ಲಿ ಬರಬೇಕು? ಅನ್ನುವ ಪ್ರಶ್ನೆಯೂ ಮೂಡಿ ಮರೆಯಾಯಿತು.

ಬ್ಲೇಡಿನ ತುಂಡನ್ನು, ಮಗುವನ್ನು ಬಿಟ್ಟು ಹೊರಡುವ ನಿರ್ದಯಿ ತಾಯಿಯಂತೆ ಅಲ್ಲೆ ಬಿಟ್ಟು ಒಳಗೆ ಬಂದ. ಸೀಸದ ಕಡ್ಡಿಯನ್ನು ಬ್ಯಾಗಿನೊಳಗೆ ನೂಕಿದ. ಒಂದ್ಹೊತ್ತು ಏನೂ ತೋಚದೆ ಸುಮ್ಮನೆ ಕೂತ. ಮತ್ತೆ ಬ್ಯಾಗಿನಿಂದ ಆಚೆ ತೆಗೆದ. ಕೈಯಲ್ಲಿಟ್ಟು ಏನನ್ನೊ ಧ್ಯಾನಿಸುವಂತೆ ಕೂತ. ಧ್ಯಾನ ಫಲಿಸದೆ ಮತ್ತೆ ಅದನ್ನು ಬ್ಯಾಗಿಗೆ ಹಾಕಿದ. ವಿಚಿತ್ರ ತೊಳಲಾಟದಲ್ಲಿ ಎಷ್ಟೊ ಹೊತ್ತು ಕಳೆದ. ಸೀಸದ ಕಡ್ಡಿ ಚೂಪು ಮಾಡಿಕೊಳ್ಳುವ ಒಂದು ಸಣ್ಣ ದಾರಿಯೂ ಕಾಣದೆ ಕಂಗೆಟ್ಟ. ಕಾಡಿನ ಮಧ್ಯದಲ್ಲಿ ದಾರಿ ತಪ್ಪಿ ಪರಿತಪಿಸುವ ಚಾರಣಿಗನಂತಾದ.

ಎಷ್ಟೊ ಹೊತ್ತಿನ ಬಳಿಕ ತನ್ನ ಮಾಸ್ತರರ ಬಳಿಗೆ ಒಯ್ದು ಚೂಪು ಮಾಡಿಸಿಕೊಂಡರೆ ಹೇಗೆ? ಎಂಬ ಯೋಚನೆ ಹೊಳೆಯಿತು. ಒಂದು ಕ್ಷಣ